ಅಂಶಗಳನ್ನು ಹೀಗೆ ಸರಳೀಕರಿಸಬಹುದು.

1 ಬುದ್ಧಿಮಾಂದ್ಯ ಮಕ್ಕಳ ಹೊರತಾಗಿ ಉಳಿದವರ ಬುದ್ಧಿಶಕ್ತಿಯನ್ನು ಅಳೆಯುವ ಪ್ರಯತ್ನ ಮಾಡಬಾರದು. ಯಾವುದೇ ಹಂತದಲ್ಲಿ ಮಕ್ಕಳ ಬುದ್ಧಿಶಕ್ತಿ, ಯೋಗ್ಯತೆಗಳ ಬಗೆಗೆ ಅನುಮಾನವನ್ನು ವ್ಯಕ್ತಪಡಿಸಬಾರದು. ನಿಮ್ಮ ಎಲ್ಲಾ ಪ್ರಯತ್ನಗಳಿಗೂ ನಮ್ಮ ಸಂಪೂರ್ಣ ಬೆಂಬಲವಿದೆ ಎನ್ನುವ ಧೈರ್ಯವನ್ನು ಪೋಷಕರು ಮಕ್ಕಳಲ್ಲಿ ತುಂಬುತ್ತಾ ಇರಬೇಕು.

2 ಪೋಷಕರು ಮಕ್ಕಳಿಗೆ ಮಾಡಬಹುದಾದ ಅತಿದೊಡ್ಡ ಸಹಾಯವೆಂದರೆ ಮಕ್ಕಳು ತಮ್ಮೊಳಗಿನ ಶಕ್ತಿಯನ್ನು ಗುರುತಿಸಿಕೊಳ್ಳಲು ಮತ್ತು ಅದನ್ನು ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗುವ ವಾತಾವರಣವನ್ನು ಕಲ್ಪಿಸುವುದು ಮತ್ತು ಮಕ್ಕಳಿಗೆ ಅವರ ಜವಾಬ್ದಾರಿಯ ಅರಿವನ್ನು ಮೂಡಿಸುವುದು. ಇದು ಸಾಧ್ಯವಾಗುವುದು ಮಕ್ಕಳ ಜೊತೆ ಉತ್ತಮ ಭಾವನಾತ್ಮಕ ಸಂಬಂಧವಿದ್ದಾಗ ಮಾತ್ರ.

3 ಮಕ್ಕಳಿಗೆ ಅವರ ಮನಸ್ಸನ್ನು ಬಿಚ್ಚಿಡಲು ಉತ್ತೇಜಿಸಬೇಕು. ಅವರ ಮಾತುಗಳನ್ನು ಸಹನೆಯಿಂದ, ಆಸಕ್ತಿಯಿಂದ ಕೇಳುತ್ತಾ ಇರಬೇಕು. ಎಲ್ಲಾ ವಿಚಾರಗಳಿಗೂ ಪೋಷಕರು ತಮ್ಮ ಉಪದೇಶ, ಬುದ್ಧಿವಾದ, ಸಲಹೆಗಳನ್ನು ಕೊಡುವ ಅಗತ್ಯವೇನಿಲ್ಲ. 'ನನ್ನ ಅಭಿಪ್ರಾಯ ಹೀಗಿದೆ. ನಿನಗೆ ಹೇಗೆ ಸರಿಯೆನಿಸುತ್ತದೆ ಅಂತ ಯೋಚಿಸು. ನೀನು ಸರಿಯಾದ ದಾರಿಯಲ್ಲಿರುವವರೆಗೆ ನಮ್ಮ ಸಂಪೂರ್ಣ ಬೆಂಬಲವಿದೆ' ಎನ್ನುವ ಆತ್ಮವಿಶ್ವಾಸವನ್ನು ತುಂಬಬೇಕು.

4 ಮಕ್ಕಳ ನಡತೆಯ ಬಗೆಗೆ ಅನುಮಾನಗಳಿದ್ದಾಗ ಶಿಕ್ಷಕರ ಅಥವಾ ಸ್ನೇಹಿತರ ಮೂಲಕ ಪತ್ತೇದಾರಿ ಕೆಲಸ ಮಾಡಲೇಬಾರದು. ಮಕ್ಕಳೊಡನೆ ನೇರವಾಗಿ ಪ್ರೀತಿಯಿಂದ, ಕಾಳಜಿಯಿಂದ ಮಾತನಾಡಬೇಕು. ಪೋಷಕರು ತಮ್ಮ ಅಭಿಪ್ರಾಯಗಳನ್ನು ಸರಳವಾಗಿ, ಆಪಾದನೆಯ ರೂಪವನ್ನು ಕೊಡದೆ ಅವರಲ್ಲಿ ಹೇಳಬೇಕು. ಮೂರನೆಯವರ ಪ್ರವೇಶದಿಂದ ಮಕ್ಕಳ ಮತ್ತು ಪೋಷಕರ ನಡುವಿನ ಸಂಬಂಧಗಳು ಹಾಳಾಗುತ್ತವೆ. ಹಾಗೆ ಮೂರನೆಯವರ ಅಗತ್ಯವಿಲ್ಲದೆ ನೇರವಾಗಿ ಮಕ್ಕಳೊಡನೆ ಮಾತನಾಡುವ ಸಂಬಂಧವನ್ನು ಉಳಿಸಿಕೊಳ್ಳಬೇಕು. ಆಗ ಬರಬಹುದಾದ ಭಿನ್ನಾಭಿಪ್ರಾಯಗಳನ್ನು ನಿಧಾನವಾಗಿ ಪರಿಹರಿಸಿಕೊಂಡರೆ ಸಂಬಂಧಗಳ ಆತ್ಮೀಯತೆ ಉಳಿಯುತ್ತದೆ.

5 ಎಲ್ಲಾ ಸಂದರ್ಭಗಳಲ್ಲಿಯೂ ಪೋಷಕರು ತಮ್ಮ ಆಯ್ಕೆ ಮತ್ತು ಆಸಕ್ತಿಗಳನ್ನು ಮಕ್ಕಳಿಗೆ ಹೇಳುತ್ತಾ ಬಂದರೂ ಕೊನೆಯ ನಿರ್ಧಾರವನ್ನು ಮಕ್ಕಳಿಗೇ ಬಿಡಬೇಕು. ಮಕ್ಕಳಿಗೆ ತೀರ್ಮಾನಗಳನ್ನು ತೆಗೆದುಕೊಳ್ಳುವ ತರಬೇತಿ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ತಪ್ಪುಗಳನ್ನೇ ಮಾಡದೇ ಕಲಿಯುವುದು ಅಸಾಧ್ಯ. ನಮ್ಮ ಆಯ್ಕೆಗಳನ್ನು ಮಕ್ಕಳ ಮೇಲೆ ಹೇರುತ್ತಾ ಹೋಗುವುದರಿಂದ ಅವರನ್ನು ನಮ್ಮ ಮಿತಿಗಳಲ್ಲಿ ಮಾತ್ರ ಬೆಳೆಸುತ್ತೇವೆ. ಜೊತೆಗೆ ಮಕ್ಕಳ ಸ್ವಂತಿಕೆಯನ್ನು ನಾಶಮಾಡುತ್ತಾ ಹೋಗುತ್ತೇವೆ.

## ಪ್ರೀತಿಯ ಅನುಭವವಾಗುವುದು ಹೇಗೆ?

ಶಿಕ್ಷಣವನ್ನು ನೀಡಲು ಶಾಲೆಗಳು, ಮನೆಪಾಠ, ಪುಸ್ತಕಗಳು, ಅಂತರ್ಜಾಲ ಹೀಗೆ ಹಲವಾರು ಸಾಧನಗಳಿವೆ. ಆದರೆ ಮಕ್ಕಳಿಗೆ ಪ್ರೀತಿಯನ್ನು, ಭಾವನಾತ್ಮಕ ಬೆಂಬಲವನ್ನು ಪೋಷಕರು ಮಾತ್ರ ನೀಡಬಹುದು. ಅದನ್ನು 'ಔಟ್‌ಸೋರ್ಸ್' (ಹೊರಗುತ್ತಿಗೆ) ಮಾಡಲು ಸಾಧ್ಯವೇ ಇಲ್ಲ!

ನಾವೆಲ್ಲಾ ಮಕ್ಕಳನ್ನು ಪ್ರೀತಿಸುತ್ತೇವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆ ಪ್ರೀತಿ ಮಕ್ಕಳ ಅನುಭವಕ್ಕೆ ಬರುತ್ತಿದೆಯೇ? ಮಗಳು ಬಹಳ ಕೋಪಿಸಿಕೊಳ್ಳುತ್ತಾಳೆ ಎನ್ನುವ ದೂರಿನೊಂದಿಗೆ ಆಪ್ತಸಲಹೆಗೆ ಬಂದಿದ್ದ ಪೋಷಕರಿಗೆ ಒಂದು ಪ್ರಶ್ನೆ ಕೇಳಿದೆ.

'ಮಗಳಿಗೆ ಶಿಸ್ತು ಕಲಿಸುವುದು, ಹೋಂವರ್ಕ್ ಮಾಡಿಸುವುದು, ಬುದ್ಧಿ ಹೇಳುವುದು ಮುಂತಾದ ಸಮಯವನ್ನು ಬಿಟ್ಟು ಪೂರ್ಣ ಮನಸ್ಸಿನಿಂದ, ಸಂತೋಷದಿಂದ ಅವಳ ಜೊತೆ ದಿನನಿತ್ಯ ಎಷ್ಟು ಸಮಯ ಕಳೆಯುತ್ತೀರಾ?'

'ದಿನಕ್ಕೆ ಬಿಡಿ ಸಾರ್ ವಾರಕ್ಕೆ ಅರ್ಧ ಗಂಟೇನೂ ಆ ರೀತಿ ಕಳೆಯಲ್ಲ' ಎಂದು ಅವರು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಈ ರೀತಿಯ ತಂದೆ–



## ನೂರೆಂಟು ಆಕರ್ಷಣೆಗಳು

ಇವತ್ತಿನ ಮಕ್ಕಳಿಗೆ ಆಕರ್ಷಣೆಗಳು ಹಲವು. ಮೊಬೈಲ್, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು, ವಾಹನಗಳು, ಜಂಕ್‌ಫುಡ್‌ಗಳು, ಬಟ್ಟೆಬರೆ ಹೀಗೆ ಹತ್ತು ಹಲವು ವಸ್ತುಗಳಿಂದ ಮಕ್ಕಳನ್ನು ಸೆಳೆಯುವ ನಿರಂತರ ಪ್ರಯತ್ನವನ್ನು ನಮ್ಮ ಉದ್ಯಮಿಗಳು ಮಾಡುತ್ತಲೇ ಇರುತ್ತಾರೆ. ಇವತ್ತಿನ ವ್ಯಾಪಾರ ವ್ಯವಹಾರಗಳಿಗೆ ಹಣ ಮಾಡುವುದರ ಹೊರತಾಗಿ ಯಾವುದೇ ನೈತಿಕ ಮಾನದಂಡಗಳು ಇಲ್ಲದಿರುವುದರಿಂದ ನಮ್ಮ ಕಾನೂನುಗಳು ಇವುಗಳನ್ನು ನಿರ್ಬಂಧಿಸಲಾರವು. ಇವುಗಳ ಜಾಹೀರಾತುಗಳ ಮೇಲೆ ನಿಯಂತ್ರಣ ಹೇರುವುದು ನಮ್ಮ ಸರ್ಕಾರಗಳಿಗೆ ಸಾಧ್ಯ. ಆದರೆ ಕೇವಲ ಜಿಡಿಪಿ ಆಧಾರಿತ ಅಭಿವೃದ್ಧಿಯ ಮೇಲೆ ಕಣ್ಣಿಟ್ಟಿರುವ ಆಳುವವರಿಗೆ ಉಳಿದೆಲ್ಲಾ ಸಮಸ್ಯೆಗಳು ನಗಣ್ಯವಾಗಿದೆ.

ಪೋಷಕರಿಗೆ ಈ ಎಲ್ಲಾ ಆಕರ್ಷಣೆಗಳಿಂದ ಮಕ್ಕಳನ್ನು ದೂರವಿಡುವುದು ಅತ್ಯಂತ ಕಷ್ಟ. ಜೊತೆಗೆ ಎಲ್ಲವನ್ನೂ ಕೊಳ್ಳಲು ಆರ್ಥಿಕ ಇತಿಮಿತಿಗಳಿರುವಾಗ ಪರಿಸ್ಥಿತಿ ಕೈಮೀರಿ ಪೋಷಕರ ಮತ್ತು ಮಕ್ಕಳ ನಡುವಿನ ಸಂಬಂಧಗಳು ಹದಗೆಡುತ್ತವೆ. ಆಗ ಪೋಷಕರು ಅನಿವಾರ್ಯವಾಗಿ ಹಿಡಿಯುವ ದಾರಿ ತಮ್ಮ ಅಧಿಕಾರವನ್ನು ಉಪಯೋಗಿಸಿ ಮಕ್ಕಳನ್ನು ಹಿಡಿತದಲ್ಲಿಡುವುದು. ಇದಕ್ಕೆ ಬದಲಾಗಿ ಮಕ್ಕಳೊಡನೆ ಆರ್ಥಿಕ ವಿಷಯಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದರ ಜೊತೆಗೆ ಇಂತಹ ಗ್ಯಾಜೆಟ್‌ಗಳ ಅಗತ್ಯ, ಮಿತಿ ಮತ್ತು ಅಪಾಯಗಳ ಬಗೆಗೆ ಮಾಹಿತಿ ನೀಡುವುದರ ಮೂಲಕ ನಿಭಾಯಿಸುವುದು ಉತ್ತಮ ಪರಿಣಾಗಳನ್ನು ನೀಡುತ್ತದೆ.